# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಆರ್.ಕುಮಾರ್ ಯಾನೆ ಎನ್.ಟಿ. ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯಿತಿ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) & 48(5) ರಡಿ ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1135/ಗ್ರಾಪಂಅ/2018, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿಪಂ:ಶಿ:ಯೋಶಾ/ಸಭಾ/2018-19, ದಿನಾಂಕ:22.09.2018.
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ/202/ಗ್ರಾಪಂಅ/2019, ದಿನಾಂಕ:10.05.2019.
4. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, ಇವರ ಪತ್ರ ಹಾಗೂ ವಿಚಾರಣಾ ವರದಿ ಸಂಖ್ಯೆ:ಪ್ರಾಆಕ/ಅಭಿವೃದ್ಧಿ/ಸಿಆರ್/11/2018-19, ದಿನಾಂಕ:10.12.2019.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ,1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವರ್ತನೆ, ಅಧಿಕಾರ ಮತ್ತು ಹಣ ದುರುಪಯೋಗಕ್ಕಾಗಿ ಕ್ರಮಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಶಿವಮೊಗ್ಗ ಇವರು ಶ್ರೀ ಎನ್.ಕೆ ರಾಮಕೃಷ್ಣ ಬಿನ್ ಎನ್.ಎಸ್.ಕೆ ಸ್ವಾಮಿಯವರ ಹೆಸರಿನಲ್ಲಿ ನಿಧಿಗೆ ಗ್ರಾಮದ ಸರ್ವೇ ನಂಬರ್ 185 ರಲ್ಲಿ ನಿರ್ಮಿಸಿರುವ ಸರ್ಕಾರಿ ನೌಕರರ ಸೌಹಾರ್ದ ಸೊಸೈಟಿಯಲ್ಲಿ ಅವರ ತಂದೆಯ ಹೆಸರಿನಲ್ಲಿ 40*60 ಅಡಿ ವಿಸ್ತೀರ್ಣದ ನಿವೇಶನವಿದ್ದು, ಹಾಲಿ ನಿವೇಶನ ಸಂಖ್ಯೆ 101 ಆಗಿರುತ್ತದೆ. ಇದನ್ನು ಖಾತೆ ಮಾಡಿ ಕೊಡುವ ಸಂಬಂಧ ರೂ.16,800/- ಗಳ ಶುಲ್ಕವನ್ನು ಪಾವತಿಸುವ ವೇಳೆಯಲ್ಲಿ ರೂ.30,000/- ಗಳ ಲಂಚದ ಹಣ ಸ್ವೀಕರಿಸುವಾಗ ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು ನಿಧಿಗೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಶ್ರೀ ಆರ್.ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪನವರು, ಟ್ರ್ಯಾಪ್ ಆಗಿರುತ್ತಾರೆ. ಇವರು ಚುನಾಯಿತ ಪ್ರತಿನಿಧಿಯಾಗಿದ್ದು, ಈಗಿರುವ ಸ್ಥಾನದಲ್ಲಿ ಮುಂದುವರಿಯಲು ಬಿಟ್ಟರೆ ಅಧಿಕಾರ ದುರುಪಯೋಗಪಡಿಸಿಕೊಂಡು ಸಾಕ್ಷಿದಾರರ ಮೇಲೆ ಪ್ರತಿಕೂಲ ಪ್ರಭಾರ ಬೀರುವ, ದಾಖಲಾತಿಗಳನ್ನು ತಿದ್ದುಪಡಿ ಮಾಡುವ ಮತ್ತು ತನಿಖೆಗೆ ಭಾದಕವಾಗುವ ಸಾಧ್ಯತೆ ಇರುತ್ತದೆಂದು ಇವರನ್ನು ದಿನಾಂಕ:23.08.2018 ರಂದು ಬೆಳಿಗ್ಗೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್‌ರವರು ದಸ್ತಗಿರಿ ಮಾಡಿ ಘನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು, ಶಿವಮೊಗ್ಗರವರ ಮುಂದೆ ಹಾಜರುಪಡಿಸಿದ್ದು, ಘನ ನ್ಯಾಯಾಲಯವು ದಿನಾಂಕ:24.08.2018 ರಿಂದ ದಿನಾಂಕ:16.09.2018 ರವರೆಗೆ 14 ದಿನಗಳು ನ್ಯಾಯಾಂಗ ಬಂಧನಕ್ಕೆ ಆದೇಶಿಸಿರುತ್ತಾರೆ. ಇವರ ವಿರುದ್ಧ ಭ್ರಷ್ಟಾಚಾರ ಆರೋಪವಿದ್ದು, ದಸ್ತಗಿರಿ ಮಾಡಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿ, ಇವರ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಣ 48(4) ರನ್ವಯ ಹಾಗೂ ಗ್ರಾಮ ಪಂಚಾಯತ್ ದುರ್ನಡತೆ ಹಾಗೂ ಗ್ರಾಮ ಪಂಚಾಯತ್ ಕರ್ತವ್ಯಗಳ ನಿರ್ವಹಣೆಯಲ್ಲಿ ತಪ್ಪಿತಸ್ಥನಾಗಿರುವುದರಿಂದ ಪ್ರಕರಣ 286 ರಡಿ ಗ್ರಾಮ ಪಂಚಾಯತ್ ಸದಸ್ಯರು ಭಾರತ ದಂಡ ಸಂಹಿತೆ 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988 ರ ಅಧಿನಿಯಮ ಸಂಖ್ಯೆ: 49 ರ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸಿರುವುದರಿಂದ ಇವರ ಮೇಲೆ ಸೂಕ್ತ ಕ್ರಮಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿವಮೊಗ್ಗರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಶಿವಮೊಗ್ಗ ಜಿಲ್ಲಾ ಪಂಚಾಯತ್‌ರವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಸಂಬಂಧ ಮುಂದಿನ ಕ್ರಮಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲೆ ಓದಲಾದ (3) ರ ಸರ್ಕಾರದ ಪತ್ರದಲ್ಲಿ ಸದರಿ ಪ್ರಕರಣದ ವಿಚಾರಣೆ ನಡೆಸುವ ಸಲುವಾಗಿ ಪ್ರಾದೇಶಿಕ ಆಯುಕ್ತರು, ಬೆಂಗಳೂರುರವರಿಗೆ ಕಳುಹಿಸಲಾಗಿರುತ್ತದೆ.

ಮೇಲೆ ಓದಲಾದ (4)ರಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಶ್ರೀ ಆರ್. ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ, ಶಿವಮೊಗ್ಗರವರ ವಿರುದ್ಧ ಇರುವ ದೂರಿನ ಸಂಬಂಧ ಸದರಿರವರಿಗೆ ನೋಟೀಸ್ ನೀಡಿ ದಿನಾಂಕ:01.07.2019 ಹಾಗೂ 08.11.2019 ರಂದು ವಿಚಾರಣೆ ಮಾಡಲಾಗಿರುತ್ತದೆ. ದಿನಾಂಕ:08.11.2019ರ

ವಿಚಾರಣೆ ಮಾತ್ರ ಶ್ರೀ ಆರ್.ಕುಮಾರ್@ ಎನ್.ಟಿ. ಕುಮಾರ್ ಹಾಜರಾಗಿರುತ್ತಾರೆ. ಸದರಿ ಎರಡೂ ವಿಚಾರಣೆಗೆ ನಿಧಿಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ಹಾಜರಿರುತ್ತಾರೆ.

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನಿಧಿಗೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಶ್ರೀ ಆರ್.ಕುಮಾರ್ ಯಾನೆ ಎನ್.ಟಿ. ಕುಮಾರ್ ಬಿನ್ ರಂಗಪ್ಪರವರು ದಿನಾಂಕ:23.08.2019 ರಂದು ರೂ.30,000/-ಗಳ ಲಂಚದ ಹಣವನ್ನು ಪಡೆದುಕೊಳ್ಳುವಾಗ ಎ.ಸಿ.ಬಿ ಪೋಲೀಸ್‌ರ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಆರೋಪಿತರನ್ನು ದಸ್ತಗಿರಿ ಮಾಡಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಧೀಶರು ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ. ಈ ಕಛೇರಿಯಲ್ಲಿ ದಿನಾಂಕ:01.07.2019 ರಂದು ನಡೆದ ವಿಚಾರಣೆಗೆ ಹಾಜರಾಗಿರುವುದಿಲ್ಲ. ದಿನಾಂಕ:08.11.2019 ರಂದು ಹಾಜರಾಗಿ ನೀಡಿರುವ ಹೇಳಿಕೆಯು ಸಮರ್ಥನೀಯವಾಗಿಲ್ಲದಿರುವುದರಿಂದ ಹಾಗೂ ಯಾವುದೇ ಹಣವನ್ನು ತಾನು ಕೇಳಿಲ್ಲ ಕಕ್ಷಿದಾರರೇ ಸ್ವತಃ ಹಣವನ್ನು ಇತರೆ ಸದಸ್ಯರಿಗೂ ಹಂಚಲು ನೀಡಿರುತ್ತಾರೆಂದು ವಿಚಾರಣಾ ಸಂದರ್ಭದಲ್ಲಿ ಮೌಖಿಕವಾಗಿ ತಿಳಿಸಿರುವುದರಿಂದ ಶ್ರೀ ಆರ್.ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪ ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿರವರು ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿರುವುದರಿಂದ, ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತು 48(5) ರಡಿ ಇವರ ಸದಸ್ಯತ್ವವನ್ನು ರದ್ದುಪಡಿಸಬಹುದಾಗಿದೆಯೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ವಿಚಾರಣೆ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಆರ್.ಕುಮಾರ್ @ ಎನ್.ಟಿ. ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ, ಶಿವಮೊಗ್ಗ ಇವರು ರೂ.30,000/- ಗಳ ಲಂಚದ ಹಣವನ್ನು ಪಡೆದುಕೊಳ್ಳುವಾಗ ಎ.ಸಿ.ಬಿ ಪೋಲೀಸ್‌ರ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಆರೋಪಿತರನ್ನು ದಸ್ತಗಿರಿ ಮಾಡಿ ಮಾನ್ಯ ಪ್ರಧಾನ ಮತ್ತು ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ ಹಾಗೂ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣದ 48(4) ಮತ್ತು 48(5) ರನ್ವಯ ಉಪಾಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/30/ಗ್ರಾಪಂಅ/2020, ಬೆಂಗಳೂರು, ದಿನಾಂಕ:29.07.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಆರ್ ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ, ಶಿವಮೊಗ್ಗ ಇವರು ರೂ.30,000/-ಗಳ ಲಂಚದ ಹಣ ಸ್ವೀಕರಿಸುವಾಗ ಎ.ಸಿ.ಬಿ ಪೋಲೀಸ್‌ರ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಆರೋಪಿತರನ್ನು ದಸ್ತಗಿರಿ ಮಾಡಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಧೀಶರು ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ. ಉಪಾಧ್ಯಕ್ಷರು ಸಮರ್ಪಕವಾಗಿ ಜವಾಬ್ದಾರಿಯುತವಾಗಿ ತಮ್ಮ ಕರ್ತವ್ಯಗಳನ್ನು ನಿಭಾಯಿಸದೆ ಇರುವುದು ಸಾಬೀತಾಗಿದೆ. ಆದುದರಿಂದ, ಶ್ರೀ ಆರ್.ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ, ಶಿವಮೊಗ್ಗ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ,1993 ರ ಪ್ರಕರಣದ 48(4) ಮತ್ತು 48(5) ರನ್ವಯ ನಿಧಿಗೆ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತಕ್ಷಣ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚೇತನ. ಎಂ.) 29/7/21
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು, 2ನೇ ಮಹಡಿ. ಬಿ.ಎಂ.ಟಿ.ಸಿ ಕಟ್ಟಡ, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು.

2. ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ ಜಿಲ್ಲೆ.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ.
5. ಶ್ರೀ ಆರ್ ಕುಮಾರ್ @ ಎನ್.ಟಿ ಕುಮಾರ್ ಬಿನ್ ರಂಗಪ್ಪ, ಉಪಾಧ್ಯಕ್ಷರು, ನಿಧಿಗೆ ಗ್ರಾಮ ಪಂಚಾಯ್ತಿ, ಶಿವಮೊಗ್ಗ (ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ಮುಖಾಂತರ)
6. ಗಣಕ ಕೋಶ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

*******